ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 3, Nov-Dec 2020, 116-121
©*IIMRD*, Mysuru
IIMRD JOURNALS
www.iimrd.com

# ಒಡಪು–ಒಗಟುಗಳ ಅವಲೋಕನ

ಡಾ. ಎಸ್. ಬಿ. ರಾಠೋಡ[1]

## ಪೀಠಿಕೆ

ಜನಪದರ ಬಾಯಿಯಲ್ಲಿ ಅತ್ಯಂತಹ ಜನಪ್ರಿಯವಾದ ಪ್ರಕಾರವೆಂದರೆ ಒಡಪು–ಒಗಟು. ಇವು ಪ್ರಾಚೀನ ಕಾಲದಿಂದ ಇಂದಿನವರೆಗೂ ಬಳಕೆಯಲ್ಲಿದೆ. ಇತ್ತೀಚಿನ ದಿನಗಳಲ್ಲಿ ಇವುಗಳ ಬಳಕೆ ಕಡಿಮೆಯಾಗಿದೆ. ಈ ಸಾಹಿತ್ಯ ಪ್ರಕಾರವನ್ನು ಪ್ರಜ್ಞಾವಂತರಾದ ನಾವುಗಳು ತಿಳಿದು ಅರ್ಥೈಸಿಕೊಂಡು ಭರದಿಂದ ಸಾಗುತ್ತಿರುವ ಯಾಂತ್ರಿಕ ಜನರ ಬದುಕಿಗೆ ಇವುಗಳ ಮಹತ್ವ ತಿಳಿಸಿಕೊಡುವುದು ಅತ್ಯ ಅವಶ್ಯಕ. ಒಂದಾನೊಂದು ಕಾಲದಲ್ಲಿ ಅವಿಭಕ್ತ ಕುಟುಂಬದ ಹಿರಿಯರೇ ಟೆಲಿವಿಜನ್‌ನಂತೆ ಮನೆಯ ಎಲ್ಲ ಸದಸ್ಯರನ್ನು ಮನೋರಂಜನೆಯಲ್ಲಿ ತೇಲಿಸುತ್ತಿದ್ದರು. ಪ್ರಮುಖವಾಗಿ ಒಡಪು–ಒಗಟುಗಳನ್ನು ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಮದುವೆ, ಮುಂಜುವಿ, ಗಟ್ಟಿಗಡಬ, ಸೀಮಂತ ಇತ್ಯಾದಿ ಮಂಗಲಕಾರ್ಯಕ್ರಮಗಳಲ್ಲಿ ಸಮಾವೇಶಗೊಂಡ ಸಮುದಾಯಕ್ಕೆ ಮನೋರಂಜನೆ, ವಿನೋದ, ಮುದ ನೀಡುವ ದೃಷ್ಠಿಯಲ್ಲಿ ರಚನೆಗೊಂಡಿರುವುದು ಖಚಿತ.

## ಒಡಪು

ಗಂಡ–ಹೆಂಡಿರು ತಮ್ಮ ಗಂಡಂದಿರ, ಹೆಂಡಂದಿರ ಹೆಸರುಗಳನ್ನು ಹೇಳುವಾಗ, ಹೊಂದಿಸಿ ಹೇಳುವ ಚತುರೋಕ್ತಿಗಳು. ಇವುಗಳಲ್ಲಿ ಶೃಂಗಾರ ರಸ, ಹಾಸ್ಯರಸ, ಪ್ರೀತಿ, ಸಲುಗೆ, ವಿನೋದ, ಚಾಟೋಕ್ತಿ ಇವೆಲ್ಲವು ಒಂದರೊಡನೊಂದು ಬೆರತು ಇಡೀ ಪರಿಸರವನ್ನು ರಂಗೇರಿಸಿ ಹಾಸ್ಯದ ಹೊನಲಿನಲ್ಲಿ ತೇಲಾಡಿಸುವ ಶಕ್ತಿ ಈ ಒಡಪು ಸಾಹಿತ್ಯಕ್ಕಿದೆ. ಮುಖ್ಯವಾಗಿ ನವದಂಪತಿಗಳು ತಮ್ಮ ಗಂಡ ಹೆಂಡಿರ ಹೆಸರುಗಳನ್ನು ಹೇಳುವಂತಹ ಸಂದರ್ಭದಲ್ಲಿ ಹೆಂಡತಿಯಾದವಳು ಅರ್ಥಪೂರ್ಣವಾಗಿ ಒಂದು ಒಡಪನ್ನು ಹಾಕಿ ಗಂಡನ ಹೆಸರನ್ನು ಹೇಳುವಳು. ಹಾಗೆಯೇ ಗಂಡನಾದವನು ತಾನೊಂದು ಒಡಪನ್ನು ಬಳಕೆ ಮಾಡಿ ತನ್ನ ಮುದ್ದಿನ ಮಡದಿಯ ಹೆಸರು ಹೇಳುವನು. ಹೀಗೆ ಅರ್ಥವನ್ನು ಹಾಕಿ ಹೇಳದಿದ್ದರೆ ಕೇಳುಗರು ಬಿಡುವುದಿಲ್ಲ ಈ ಒಡಪುಗಳಲ್ಲಿ ಗಂಡು ಹೆಣ್ಣುಗಳನ್ನು ಛೇಡಿಸಿ, ವ್ಯಂಗ್ಯಮಾಡಿ ಹೇಳುವ ಹೆಸರುಗಳ ಬಗೆ ಒಬ್ಬರಿಗೊಬ್ಬರನ್ನು ಕೆಣಕಿಸುತ್ತವೆ; ರೇಗಿಸುತ್ತವೆ. ಈ ಮೂಲಕ ಇವರಿಬ್ಬರೂ ಹತ್ತಿರವಾಗುತ್ತಾರೆ. ನವದಂಪತಿಗಳ ಸಂಕೋಚ ದೂರ ಮಾಡಲು ಈ ಒಡಪುಗಳು ಸಹಕಾರಿಯಾಗಿವೆ.

---

[1] *ಮುಖ್ಯಸ್ಥರು, ಕನ್ನಡ ವಿಭಾಗ ಹಾಗೂ ಸಂಶೋಧನಾ ಮಾರ್ಗದರ್ಶಕರು, ಎಸ್. ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ.*

ಉದಾ : ಗಂಡನಿಗೆ ಹೆಂಡತಿಯ ಹೆಸರು ಕೇಳಿದಾಗ....

**ದಪ್ಪ ಮೂಗು ಕಪ್ಪ ಬಣ್ಣ ಸಪ್ಪಗಿನ ಮಾರಿ**

**ಸಪ್ಪಳಿಲ್ಲದ್ದಾಂಗ ಹಪ್ಪಳಾ ತಿಂತಾಳ ಬಂಗಾರಿ.**

ಹೆಂಡತಿಗೆ ಗಂಡನ ಹೆಸರು ಕೇಳಿದಾಗ......

***ಕಟಕ ರೊಟ್ಟಿ ಕಾರದ ಚಟ್ನಿ ! ಕಟಕೊಂಡು ಹೋಗಂದರ***

***ಸೆಟಗೊಂಡ ಹೋಗತಾರ ಮಲ್ಲನಗೌಡ.***

ಹೀಗೆ ಗಂಡ–ಹೆಂಡಿದಿರು ಒಡಪಾ ಹಾಕಿ ಹೆಸರು ಹೇಳುತ್ತಾರೆ. ಆರತಿ ಎತ್ತುವ ಮತ್ತು ಇಳಿಸುವ ಸಂದರ್ಭದಲ್ಲಿ ಹಿರಿಯರೂ ಕೂಡ ಒಡಪಿಟ್ಟು ಹೆಸರು ಹೇಳುವುದು ರೂಡಿಯಾಗಿತ್ತು.

ಈ ಒಡಪುಗಳನ್ನು ಪ್ರಾದೇಶಿಕವಾಗಿ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ವಿಭಿನ್ನ ಹೆಸರುಗಳಿಂದ ಕರೆದಿರುವದುಂಟು. ಚಿತ್ರದುರ್ಗ ಮತ್ತು ಶಿವಮೊಗ್ಗ ಪ್ರದೇಶಗಳಲ್ಲಿ ಬೆಡಗು, ಮಂಡ್ಯ ಪ್ರದೇಶದಲ್ಲಿ ಜೋಡೆಸರು, ಚಿಕ್ಕಮಗಳೂರು ಪರಿಸರದಲ್ಲಿ ತೊಡಕು ಎಂದೂ, ಬೆಂಗಳೂರು ವಿಭಾಗದಲ್ಲಿ ಒಡಚು ಎಂದು ಉತ್ತರಕರ್ನಾಟದಲ್ಲಿ ಒಡಪು ಅಥವಾ ಒಡಪಾ ಎಂದು ಕರೆಯುವುದನ್ನು ಕಾಣುತ್ತೇವೆ. ಪ್ರಾದೇಶಿಕವಾಗಿ ಪರಿಸರಕ್ಕೆ ಅನುಗುಣವಾಗಿ ವಿವಿದ ಹೆಸರುಗಳಿಂದ ಕರೆದರೂ ಅರ್ಥಗಳಲ್ಲಿ ಭಿನ್ನತೆ ಕಾಣುವುದಿಲ್ಲ.

**ಒಡಪಿನ ಮೂಲ**

ಒಡೆ ಮೂಲಧಾತುವಿನಿಂದ ಒಡಪು ಶಬ್ದ ರೂಪತಾಳಿದೆ. ಹೃದಯದಲ್ಲಿ ಮೂಡಿದ ಭಾವನೆಗಳನ್ನು ಬಿಡಿಸಿ ಹೇಳುವ ಎಂಬುವುದು ಸಿಪಿಕೆ ರವರ ಅಭಿಮತ. ಒಡ=ಒಡ= Union being together with ಎಂಬುವುದಕ್ಕೆ 'ಪು' ಪ್ರತ್ಯಯ ಸೇರಿ ಸಿದ್ಧವಾದ ನಾಮಪದ ಗಂಡನ ಮತ್ತು ಹೆಂಡತಿಯ ಹೆಸರಿಗೆ ವರ್ಣನೆಯಾಗಿ ಅದರೊಂದಿಗೆ ಒಡಗೂಡಿಯೇ ಬರುವುದರಿಂದ ಇದು ಒಡಪು ಎನಿಸಿಕೊಳ್ಳುವುದು ಜ್ಯೋತಿ ಹೊಸುರು ರವರ ಅಭಿಪ್ರಾಯ. ಒಡಪು ಎಂದರೆ ಒಡವೆ ಇಲ್ಲವೆ ವಿಶೇಷಣ ಎಂದು ಅರ್ಥೈಸಬಹುದು. ಗಂಡು–ಹೆಣ್ಣಿನ ಸೌಂದರ್ಯ, ಬಲ, ಗುಣ–ಸ್ವಭಾವ ಮುಂತಾದವುಗಳ ಕುರಿತು ವರ್ಣನೆಗ್ಯೆಯುದೇ ಒಡಪೆನಿಸಿಕೊಳ್ಳುವುದು. ನಿರ್ದಿಷ್ಟ ನಿಷ್ಪತ್ತಿ ಹೇಳುವುದು ಕಠಿಣವಾದರೂ ಪೊಡರ್ಪು ಹೋಗಿ ಒಡಪು ಆಗಿರಬೇಕು. ಎಂಬುವುದು ಎಸ. ಜಿ. ಇಮ್ರಾಪೂರ ರವರ ಅಭಿಪ್ರಾಯ. ಹೀಗೆ ಅವರವರ ಭಾವಕ್ಕೆ ತಕ್ಕಂತೆ ಒಡಪುಗಳ ವಿಚಾರ ವ್ಯಕ್ತಪಡಿಸಿರುವುದು ಕಾಣುತ್ತೇವೆ.

**ಒಗಟು**

ಇದೊಂದು ಗದ್ಯಸಾಹಿತ್ಯದ ಶಾಖೆಯಾಗಿದೆ. ನಮ್ಮ ಜನಪದರು ತಮ್ಮ ಆಳವಾದ ಅನಿಸಿಕೆಗಳನ್ನು ಹೊರ ಹಾಕಲು ಕಂಡುಕೊಂಡ ಹಲ ಪ್ರಕಾರಗಳಲ್ಲಿ ಒಗಟು ಒಂದೆಂದು ಹೇಳಲಾಗುತ್ತದೆ. ಜನಪದ ಸಾಹಿತ್ಯ ವರ್ಗಕ್ಕೆ ಸೇರುವ 'ಒಗಟು' ಮೂಲಭೂತವಾಗಿ ಸೃಷ್ಟಿಯೇ ಒಂದು ಪ್ರಶ್ನೆ ಜೀವನವೇ ಒಂದು

ಸಮಸ್ಯೆ ಎಂಬ ಹಿನ್ನೆಲೆಯಲ್ಲಿ ರಚಿತವಾಗಿರುವಂತೆ ತೋರುತ್ತದೆ. ಒಗಟುಗಳು ಗ್ರಾಮೀಣ ಪ್ರದೇಶದ ಜನತೆಯಲ್ಲಿ ವಯಸ್ಸು ಮತ್ತು ಲಿಂಗಭೇದವಿಲ್ಲದೆ ಸರ್ವರಲ್ಲೂ ಬಳಿಕೆಯಾಗುವುದನ್ನು ಕಾಣಸಿಗುತ್ತದೆ.

**ಒಗಟಿನ ಮೂಲ**

ನಾಗವರ್ಮನ ಅಭಿಧಾನ ವಸ್ತುಕೋಶದಲ್ಲಿ ಬಂದಿರುವ 'ಒಗಂಟೆ' ಎಂಬ ಪದವು, ಅವನ ತರುವಾಯ ಮಂಗರಸನ ಕನ್ನಡ ಕೋಶದಲ್ಲಿ ಬಂದಿರುವ 'ವಾಗಟೆ' ಎಂಬ ಪದವೂ ಇಂದಿನ 'ಒಗಟೆ' ಎಂಬ ಸಾಹಿತ್ಯಜಾತಿಯ ಹೆಸರುಗಳೇ ಆಗಿರುವವು. ಸಂಸ್ಕೃತ ಭಾಷೆಯಲ್ಲಿರುವ 'ಪ್ರಹೇಲಿಕಾ' 'ಪ್ರವಹ್ಲಿಕಾ' ಎಂಬುವುಗಳ ಸಮಾನಾರ್ಥ ಪದಗಳೆಂದು ಆ ನಿಘಂಟುಕಾರರು 'ಒಗಂಟೆ' 'ವಾಗಟೆ' ಎಂಬ ಮಾತುಗಳನ್ನು ಬಳಸಿಕೊಂಡಿದ್ದಾರೆ. ಈ ಪದಗಳು ಕನ್ನಡ ಮೂಲದಿಂದ ಕಾಣುದಿಲ್ಲ.[1] ಪ್ರಾಕೃತ ಭಾಷೆಯಿಂದ ಬಂದದ್ದು ಎಂದು ತೊರುತ್ತದೆ. ಇಂದು ಉತ್ತರ ಕರ್ನಾಟಕದ ಜನರ ಬಳಕೆಯಲ್ಲಿರುವ ಬಳಸುವ 'ಒಗಟ' ಎಂಬ 'ಅ' ಕಾರಾಂತ ಪದವೂ ದಕ್ಷಿಣ ಕರ್ನಾಟಕದವರು ಬಳಸುವ 'ಒಗಟೆ' ಎಂಬ 'ಎ' ಕಾರಾಂತ ಪದವೂ ಮೂಲ ಶಬ್ದವಾದ ಯಾವುದರವೊ ವಿಕೃತ ರೂಪಗಳಿರಬಹುದೆಂದು ನನಗೆ ಎನಿಸುತ್ತದೆ.[2] ವಚನಕಾರರು ಬೆಡಗು ಎಂಬ ಮಾತನ್ನು ಒಗಟಕ್ಕಿರುವ ಅರ್ಥದಲ್ಲಿಯೇ ಪ್ರಚಾರ ಮಾಡಿರುವುದು ಹನ್ನೇರಡನೆಯ ಶತಮಾನದಲ್ಲಿ ಕಣ್ಣಿಗೆ ಗೊಚರಿಸುತ್ತದೆ.

ಒಗಟನ್ನು ಇಂಗ್ಲೀಷಿನಲ್ಲಿ 'Riddle' ಎಂದು ಕರೆದಿರುವುದುಂಟು ಕನ್ನಡದಲ್ಲಿ ಒಗಟು. ಓಂಟು, ಒಡಕತೆ ಮುಂತಾದ ಪದಗಳ ಬಳಕೆ ಇವೆ ಎಂದು ವಿದ್ವಾಂಸರು ಅಭಿಪ್ರಾಯಪಡುವರು. ಒಗೆ ಅಥವಾ ಎಸೆ ಎಂಬ ಅರ್ಥದಲ್ಲಿ 'ಒಗಟು' ಪದ ಬಂದಿರುವದೆಂಬ ನಂಬಿಕೆ. ಒಗೆ ಅಥವಾ ಎಸೆ ಅಂದರೆ ಜನಪದಿಯ ಭಾಷೆಯಲ್ಲಿ ಪ್ರಶ್ನೆಯನ್ನು ಹಾಕು ಎಂದರ್ಥ ಕೂಡ ಆಗುತ್ತದೆ. ಇದರಲ್ಲಿ ಒಬ್ಬನು ಪ್ರಶ್ನೆಯನ್ನು ಒಡ್ಡುತ್ತಾನೆ ಇನ್ನೊಬ್ಬ ಉತ್ತರ ಹೇಳಿ ಪ್ರಶ್ನೆಯನ್ನು ಬಿಡಿಸುತ್ತಾನೆ.

ಉದಾ : **ಒಗಟು 1**: ಅಗಳೀ ಮ್ಯಾಲ ಚಿಗಳೆಪ್ಪ ಕುಂತಾನ
ಬಂದವರಿಗೆಲ್ಲಾ ಪ್ರಸಾದ ಕೊಡತಾನ

**ಉತ್ತರ**: ಚೇಳು

**ಒಗಟು 2**: ಮರದೊಳಗ ಮರಹುಟ್ಟಿ ಮರದಂತೆ ಕಾಯಾಗಿ
ತಿನಬಾರದ ಹಣ್ಣು ಬಲು ಸವಿ

**ಉತ್ತರ**: ಎಳೆಗೂಸು

ಈ ಮೇಲಿನಂತೆ ಪ್ರಶ್ನೋತ್ತರ ಬಹುತೇಕ ಎರಡು ತಂಡಗಳ ಮಧ್ಯ ನಡೆಯುತ್ತದೆ. ಒಡಚುವ ಕಥೆ ಎಂಬರ್ಥದಲ್ಲಿ ಒಡಗತೆ ಎಂಬ ರೂಪ ಪಡೆದಿರಬೆಕು. ಪ್ರಾಚೀನ ಕಾವ್ಯಗಳಲ್ಲಿ ಪ್ರಸ್ತಾಪಗೊಂಡಿರುವ ಮುಂಡಿಗೆ ಮತ್ತು ಮುಡಿಗೆ ಎಂಬ ಪದಗಳು ಒಗಟಿನ ಸಮಾನಾರ್ಥಕ ಪದಗಳು ಎಂದು ಅಭಿಪ್ರಾಯ. ಒಗಟಿನ ಮುಖ್ಯ ಲಕ್ಷಣವೆಂದರೆ ಅರ್ಥಗೋಪನಕ್ರಿಯೆ ಎಂದು ಹೇಳಲಾಗುತ್ತದೆ. ಎಂದರೆ ಅರ್ಥವನ್ನು

ಮಚ್ಚಿಡುವ ಕ್ರಿಯೆ. ಒಗಟು ಹೇಳುತ್ತಾ ಹೋದಂತೆ ಕೇಳುಗನ ಮನದಲ್ಲಿ ಅರ್ಥ ಬಿಚ್ಚಿಕೊಳುತ್ತಾ ಹೋಗುತ್ತದೆ. ಒಂದು ವೇಳೆ ಥಟ್ಟನೆ ಅರ್ಥ ಹೊಳೆಯಿತೆಂದರೆ ಒಮ್ಮೆಲೆ ನಗೆಯ ಬುಗ್ಗೆ ಚಿಮ್ಮುತ್ತದೆ.

**ಒಡಪು–ಒಗಟುಗಳ ಅರ್ಥವ್ಯತ್ಯಾಸ ಹಾಗೂ ವರ್ಗೀಕರಣ**

ಒಡಪು–ಒಗಟು ಎರಡೂ ಒಂದೇ ಎಂಬುವುದು ಜನಪದರಿಂದ ಹಿಡಿದು ಹಲವಾರು ಜನಪದ ಅಧ್ಯಯನಕಾರರಲ್ಲಿ ತಪ್ಪು ಕಲ್ಪನೆಯಿದೆ. ಆದರೆ ಇವುಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುವಾಗ ತಿಳಿದು ಬರುವ ವಿಷಯ ಬಹಳ ವಿಭಿನ್ನವಾಗಿ ತೋರುವುದು. 'ಒಡಪು' ಅಂದರೆ ಒಡವೆ ಇಲ್ಲವೆ ವಿಶೇಷಣ ಎಂದು ಅರ್ಥೈಸಬಹುದಾಗಿದೆ. ಗಂಡನ ಸೌಂದರ್ಯ, ಬಲ, ಗುಣ–ಸ್ವಭಾವ ಮುಂತಾದವುಗಳ ಹೆಚ್ಚಳವನ್ನು ಕುರಿತು ಮಾಡುವ ವರ್ಣನೆಯೇ ಒಡಪೆನಿಸಿಕೊಳ್ಳುವುದು. ಇದರ ಬಳಕೆಯ ಸಂದರ್ಭವೆಂದರೆ ನವದಂಪತಿಗಳಿಗೆ ಆರತಿ ಎತ್ತಿ ಗಂಡನ ಹೆಸರು ಹೇಳುವಂತೆ ಹೆಂಡತಿಗೂ, ಹೆಂಡತಿಯ ಹೆಸರು ಹೇಳುವಂತೆ ಗಂಡನಿಗೂ ಒತ್ತಾಯಿಸುವುದು ರೂಡಿ. ಮತ್ತೆ ಬೇರೆ ಬೇರೆ ಸಂದರ್ಭಗಳಲ್ಲಿಯೂ ಇವುಗಳ ಬಳಕೆ ಮಾಡಿಕೊಂಡಿರುವುದು ಕಾಣುತ್ತೇವೆ. ಉದಾ: ಗಂಡನ ಹೆಸರೇಳುವಾಗ.... 'ಅತ್ತಲಾಗ ಅವ್ವ ಇತ್ತಲಾಗ ನಾ, ಕತ್ತಲಾಗ ಬಂದು ಕೈ ಹಿಡಿಯುತ್ತಾನ' 'ಗೋಧಿ ಕಾಳ ಬಿತ್ತು ಆರನೂರ ಎತ್ತು, ನಮ್ಮ ರಾಯರ ಹೆಸರಲ್ಲಿ ಬಲು ಗತ್ತು' ಹೆಂಡತಿಯ ಹೆಸರೇಳುವಾಗ...'ದೀಪ ಹಚ್ಚು ಅಂದ್ರ, ದೂಪ ತೊಗೊಂಬಾ ಅಂತಾಳ' 'ಕಾಸಿದ್ರೆ ಕೈಲಾಸ....... ಇವಳ ಕೈಯಾಗ ನಾ ಇದ್ದರೆ ಖಲಾಸ'

ಹೀಗೆ ನವದಂಪತಿಗಳು ಮದುವೆಯ ಸಮಾರಂಭದಲ್ಲಿ ನೇರವಾಗಿ ಹೆಸರು ಹೇಳದೇ ವ್ಯಂಗ್ಯವಾಗಿಯೋ ಪ್ರೀತಿಯ ಬೈಗಳ ಮುಖಾಂತರೋ ಅಥವಾ ಅವರುಗಳ ಗುಣ–ಸ್ವಭಾವಗಳ ಹೊಗಳಿಕೆಯೋ, ಸೌಂದರ್ಯದ ಹೊಗಳಿಕೆಯೋ ಅಥವಾ ಪರಿಸರಕ್ಕೆ ಅನುಗುಣವಾಗಿ ತಕ್ಕ ಮಟ್ಟಿಗೆ ಜನರಿಗೆ ನಗೆಯ ಹೊನಲಲ್ಲಿ ಮುಳಗಿಸುವಂತೆ ಒಡಪ್ಪನಿಟ್ಟು ಹೆಸರು ಹೇಳುವ ಪರಂಪರೆ, ಸಂಪ್ರದಾಯ ಇದರಲ್ಲಿ ಅಡಗಿಕೊಂಡಿದೆ.

ಒಗಟು ಅಂದರೆ ಪ್ರಶ್ನೋತ್ತರಗಳಿಂದ ಕೂಡಿ ಕೊಂಡಿರುತ್ತದೆ. ಒಬ್ಬ ಒಗಟಿನ ರೂಪದಲ್ಲಿ ಪ್ರಶ್ನೆ ಕೇಳಿದರೆ ಮತ್ತೊಬ್ಬ ಅದರ ಉತ್ತರವನ್ನು ಹೇಳಬೇಕಾಗುತ್ತದೆ. ಇವುಗಳ ಬಳಕೆಯ ಸಂದರ್ಭ ಅವಿಭಕ್ತ ಕುಟುಂಬದಲ್ಲಿ ನಡೆಯುವ ಮದುವೆ, ಮುಂಜುವಿ, ಇನ್ನಿತ್ತರ ಸಮಾರಂಭದಲ್ಲಿ ಹಿರಿ ಅಜ್ಜನ ಸುತ್ತ ಅಥವಾ ಹಿರಿ ಅಜ್ಜಿ ಸುತ್ತ ಕುಟುಂಬದ ಸದಸ್ಯರೊಂದಿಗೆ ಪರಿಜನರು ಸೇರಿ ಸ್ಪರ್ಧೆ ನಡೆಸುವುದು. ಈ ಒಗಟುಗಳ ಮೂಲ ಉದ್ದೇಶ ಅಂದರೆ ಆ ಗೋಷ್ಠಿಯಲ್ಲಿ ಸೇರಿದ ಎಲ್ಲ ಜನರಿಗೆ ಮನೋರಂಜನೆ ನೀಡುವುದು. ಉದಾ: 'ಹುಟ್ಟುವಾಗ ಕೆಂಪು ಕಣ್ಣಿಗೆ ತಂಪು, ಏರಿದಾಗ ನೆತ್ತಿ ಕೆಂಡ, ಇಳಿದಾಗ ಹೂವಿನ ಕುಂಡ' (ಸೂರ್ಯ) ' ಆರುಕಾಲು ಅಂಕಣ್ಣ ಮೂರು ಕಾಲು ಡೊಂಕಣ್ಣ ಸದಾ ಮೀಸೆ ತಿರುವಣ್ಣ' (ನೊಣ) 'ಕೆಂಪು ಗರತಿ ಮಡ್ಯಾಗ ಇರತಿ, ಬರುದು ಬರತಿ ತಡ ಯಾಕ ಮಾಡತಿ' (ತೊಗರಿ) ಹೀಗೆ ಒಗಟುಗಳಲ್ಲಿ ಮನೋರಂಜನೆಯೇ ಪ್ರದಾನವಾಗಿದ್ದರು ಬುದ್ದಿಗೆ ಚುರುಕು ನೀಡುವ ಮನುಷ್ಯರಲ್ಲಿ ವಿವೇಕ ಜಾಗೃತಿಗೊಳಿಸುವ ಶಕ್ತಿಯಿದೆ. ಇವು ಮಕ್ಕಳಿಗೆ ಕ್ವಿಜ್ ಮಾದರಿಯಂತೆ ಅವರವರ ಮನೋವಿಕಾಸವನ್ನು ಹೆಚ್ಚಿಸುತ್ತವೆ. ಒಟ್ಟಿನಲ್ಲಿ ಒಡಪು–ಒಗಟುಗಳ ಅರ್ಥವ್ಯೆತ್ಯಾಸ ಈ ಮೇಲಿನಂತೆ ತಿಳಿದುಕೊಳ್ಳುವುದು ಉಚಿತ.

**ವರ್ಗೀಕರಣ**

ವಿದ್ವಾಂಸರಾದ ಅಲ್ಲಿಬಾಯಿ ದಸ್ತಗೀರ್ ರವರು ಒಡಪುಗಳನ್ನು ಅವುಗಳ ವಸ್ತುಸ್ಥಿತಿಗೆ ಅನುಗುಣವಾಗುವಂತೆ ಈ ಕೆಳಗಿನಂತೆ ಅಭಿಮತ ಹೊಂದುತ್ತಾರೆ. ಒಡಪುಗಳ ಭಾವ ಭಾಷೆಗಳನ್ನು ಆಧರಿಸಿ, ಅವರವರು ವಾಸಿಸುವ ಪ್ರದೇಶಕ್ಕೆ ಅನುಗುಣವಾಗಿ, ದಾಂಪತ್ಯ ಜೀವನದ ವೈವಿಧ್ಯಮಯಗಳನ್ನು ಅನುಸರಿಸಿ ಒಡಪುಗಳನ್ನು ಈ ರೀತಿ ವರ್ಗೀಕರಿಸಿರುವುದು ಕಾಣುತ್ತೇವೆ. 1) ಹೆಸರು ಹೇಳುವ ಕೇಳುವ ಅಕ್ಕರತೆ 2) ದಾಂಪತ್ಯ ಪ್ರೀತಿ, ಪ್ರೇಮ 3) ಗಂಡನ ಗುಣಗಾನ ಮತ್ತು ಗೌರವ 4) ಗಂಡನ ಗುಣದೋಷ 5) ತಿನಿಸು–ಉಣಿಸುವ ಸಂದರ್ಭ 6) ವೇಷ ಭೂಷಣ ಅಲಂಕಾರಗಳ ಕುರಿತು 7) ಕ್ರೀಡೆ, ಕಲೆ 8) ಕೃಷಿಗೆ ಸಂಬಂಧ ಪಟ್ಟ 9) ಶುಭ ದಿನ ಹಾಗೂ ಮಂಗಳ ಕಾರ್ಯ ಹೀಗೆ ಹಲವಾರು ರೀತಿಯಲ್ಲಿ ಒಡಪುಗಳನ್ನು ವಿಭಜಿಸಿರುವುದು ಕಾಣುತ್ತೇವೆ.

ಒಗಟುಗಳು ಬೆಡಗಿನ ವಚನಗಳಂತೆ ನಿಗೂಢವಾದ ಅರ್ಥವನ್ನು ಒಳಗೊಂಡಿದೆ. ಹೇಳುವಾಗ ಹೊರ ಅರ್ಥ ಬೆರೊಂದು ರೂಪದಲ್ಲಿ ಕಂಡರೂ ಅಂತರಾಳದಲ್ಲಿ ಮತ್ತೊಂದು ಒಗಟಾದ ಅರ್ಥ ಒಳಗೊಂಡಿರುತ್ತದೆ. ಇವುಗಳನ್ನು ಗಮನದಲ್ಲಿಟ್ಟು ವಿದ್ವಾಂಸರಾದ ಬಿ.ಆರ್ ಚಿಲುಮಿ ರವರು ಈ ರೀತಿಯಾಗಿ ವರ್ಗೀಕರಣವನ್ನು ಮಾಡಿದ್ದಾರೆ. 1) ಗಂಬೀರ ಚಿಂತನೆಯ ಒಗಟುಗಳು 2) ತಿಳಿಹಾಸ್ಯದ ಒಗಟುಗಳು 3) ಕಥಾ ಹಿನ್ನೆಲೆಯುಳ್ಳ ಒಗಟುಗಳು 4) ಸಂಭಾಷಣಾತ್ಮಕ ಒಗಟುಗಳು 5) ಗಣಿತಾತ್ಮಕ ಒಗಟುಗಳು 6) ಹೇಳಿದ ಉತ್ತರದಿಂದಲೇ ಬದಲಾಗುವ ಒಗಟುಗಳು 8) ಪ್ರಶ್ನೋತ್ತರ ಒಗಟುಗಳು ಹೀಗೆ ಒಗಟುಗಳ ವಿಧಗಳನ್ನು ಕಾಣಬಹುದು. ಒಗಟುಗಳ ಗುಣಧರ್ಮಕ್ಕೆ ಅನುಕೂಲವಾಗಿ ಪ್ರಾಕೃತಿಕ ಒಗಟುಗಳು, ಚಮತ್ಕಾರಿ ಒಗಟುಗಳು, ವೃತ್ತಿ ಸಂಬಂಧಿ ಒಗಟುಗಳು, ಪ್ರಾಣಿ ಮೂಲ ಒಗಟುಗಳು ಹೀಗೆ ಹಲವಾರು ರೀತಿಗಳಲ್ಲೂ ವಿಂಗಡಿಸಬಹುದು.

**ಉಪಸಂಹಾರ**

ಹೀಗೆ ಪ್ರಾಚೀನಕಾಲದ ಮೌಖಿಕ ಜನಪದ ಸಾಹಿತ್ಯ ಉಗ್ರಾಣದಲ್ಲಿ ಅಡಗಿರುವ ಹಲವಾರು ಸಾಹಿತ್ಯ ಪ್ರಕಾರದಲ್ಲಿ ಒಡಪು–ಒಗಟು. ಒಂದಾನೊಂದು ಕಾಲದಲ್ಲಿ ವಜ್ರದಂತೆ ಹೊಳಪಿಟ್ಟು, ಮನರಂಜನೆಯಿಂದ ಜನ–ಮಾನಸರ ಹೃದಯ ಗೆದ್ದ ಸಾಹಿತ್ಯವೆಂದರೆ ಒಡಪು–ಒಗಟು. ಮನುಷ್ಯನ ಬುದ್ದಿ ಶಕ್ತಿಯನ್ನು ಅತಿ ಚುರುಕುಗೊಳಿಸಿ, ಹಾಗೆಯೇ ಅದರರ್ಥ ತಿಳಿದು ಕೂಡಲೆ ನಗೆಯ ಹೊನಲಾಗಿ ಇಡೀ ಸಮಾರಂಭಕ್ಕೆ ಹೊಸ ಮೆರಗು ತಂದು ಕೊಡುವುದು. ಇಂತಹ ಸಾಹಿತ್ಯ ಪ್ರಕಾರವು ಇಂದು ನಮ್ಮಿಂದ ದೂರ ದೂರನೇ ಉಳಿಯುತ್ತಿರುವುದು ಸೋಜಿಗ. ಇಂದು ಹಳತನ್ನೆ ಹೊಸತನದ ಮುಖದಲ್ಲಿ ಶೋಧಿಸಿ ಮರುಜೀವ ಕೊಡುವುದು ನಮ್ಮೆಲ್ಲರ ದೊಡ್ಡ ಜವಾಬ್ದಾರಿ.

**ಕೊನೆಟಿಪ್ಪಣೆ**

1. ಬೇಟಗೇರಿ ಕೃಷ್ಣಶರ್ಮಾ. (1976). ಕನ್ನಡ ಜನಪದ ಸಾಹಿತ್ಯ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪುಟ ಸಂಖ್ಯೆ. 18
2. ಮೇಲಿನದೇ., ಪುಟ ಸಂಖ್ಯೆ. 19

## ಪರಾಮರ್ಶನ ಗ್ರಂಥಗಳು


- ಸಿ.ಸಿ.ಎ.ಪೈ, ಎಸ್.ಜೆ. (1978). ಜಾನಪದ ವೈಜ್ಞಾನಿಕ ಕ್ಷೇತ್ರಕಾರ್ಯ. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
- ಬೇಟಗೇರಿ ಕೃಷ್ಣಶರ್ಮಾ. (1976). ಕನ್ನಡ ಜನಪದ ಸಾಹಿತ್ಯ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ನಿಂಗಣ್ಣ ಸಿ. (2010). ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ. ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.
- ಸಣ್ಣರಾಮ ರಾಠೋಡ ಪಿ. ಕೆ. (2004). 'ಲಂಬಾಣಿ ಒಗಟುಗಳು ಸಾಂಸ್ಕೃತಿಕ ನೋಟ' ನೇಹಾ ಪ್ರಕಾಶನ, ಗದಗ–2004
- ಶಂಭು ಬಳಿಗಾರ ಮತ್ತು ಶ್ರೀಶೈಲ ಹುದ್ದಾರ. (2010). ಜನಪದ ಸಾಹಿತ್ಯ ಮತ್ತು ಬಯಲಾಟ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.


IIMRD
JOURNALS